ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 23-10-1999.

# *ಸಮಯದ ಕರೆ- ದಾತ ಆಗಿರಿ.*

(समय की पुकार- दाता बनो)

ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಸರ್ವಶ್ರೇಷ್ಠ ಭಾಗ್ಯವಿಧಾತ ಸರ್ವಶಕ್ತಿಗಳ ದಾತಾ ಬಾಪ್‌ದಾದಾ ನಾಲ್ಕೂ ಕಡೆ ಇರುವ ಮಕ್ಕಳೆಲ್ಲರನ್ನೂ ನೋಡಿ ಹರ್ಷಿಸುತ್ತಿದ್ದಾರೆ. ಮಧುಬನದಲ್ಲಿ ಸಮ್ಮುಖದಲ್ಲಿ ಇದ್ದರೂ, ದೇಶ ವಿದೇಶಗಳಲ್ಲಿದ್ದು ಸ್ಮೃತಿ ಮಾಡುತ್ತಿದ್ದರೂ, ನೋಡುತ್ತಿದ್ದರೂ, ಎಲ್ಲಿಯೇ ಕುಳಿತಿದ್ದರೂ, ಹೃದಯದಿಂದ ಸಮ್ಮುಖವಾಗಿಯೇ ಇದ್ದೀರಿ. ಆ ಮಕ್ಕಳೆಲ್ಲರನ್ನೂ ನೋಡಿ ಬಾಪ್‌ದಾದಾ ಖುಷಿಪಡುತ್ತಿದ್ದಾರೆ. ನೀವೆಲ್ಲರೂ ಸಹ ಖುಷಿಪಡುತ್ತಿದ್ದೀರಲ್ಲವೇ? ಮಕ್ಕಳು ಸಹ ಖುಷಿಯಾಗಿದ್ದಾರೆ. ಬಾಪ್‌ದಾದಾ ಸಹ ಖುಷಿಯಾಗಿದ್ದಾರೆ. ಮನಸ್ಸಿನ ಸದಾ ಸತ್ಯವಾದ ಈ ಖುಷಿಯೇ ಪ್ರಪಂಚದ ಎಲ್ಲಾ ದುಃಖಗಳನ್ನು ದೂರ ಮಾಡುತ್ತದೆ. ಮನಸ್ಸಿನ ಈ ಖುಷಿಯು ಆತ್ಮರಿಗೆ ತಂದೆಯ ಅನುಭೂತಿಯನ್ನು ಮಾಡಿಸುತ್ತದೆ. ಏಕೆಂದರೆ ತಂದೆಯು ಸರ್ವಾತ್ಮರಿಗೆ ಸದಾ ಸೇವಾಧಾರಿಯಾಗಿ ಮತ್ತು ಮಕ್ಕಳಾದ ನೀವೆಲ್ಲರೂ ಸಹ ತಂದೆಯೊಂದಿಗೆ ಸೇವೆಯಲ್ಲಿ ಸಹಯೋಗಿಗಳು. ಸಹಯೋಗಿಗಳಲ್ಲವೇ? ತಂದೆಯ ಸಹಯೋಗಿಗಳು ಮತ್ತು ವಿಶ್ವದಲ್ಲಿರುವ ದುಃಖವನ್ನು ಪರಿವರ್ತನೆ ಮಾಡಿ ಸದಾ ಖುಷಿಯಿಂದ ಇರುವ ಸಾಧನವನ್ನು ತಿಳಿಸುವ ಸೇವೆಯಲ್ಲಿ ಸದಾ ಉಪಸ್ಥಿತರಾಗಿ ಇರುತ್ತಿದ್ದೀರಿ. ಸದಾ ಸೇವಾಧಾರರು. ಕೇವಲ ನಾಲ್ಕು ತಾಸು ಅಥವಾ ಆರು ತಾಸು ಸೇವೆ ಮಾಡುವವರಲ್ಲ. ಪ್ರತಿಕ್ಷಣ ಸೇವೆ ಎಂಬ ವೇದಿಕೆಯ ಮೇಲೆ ಪಾತ್ರವನ್ನು ಅಭಿನಯಿಸುವ ಪರಮಾತ್ಮನ ಸಹಯೋಗಿಗಳು. ಹೇಗಾದರೆ ಸ್ಮೃತಿ ನಿರಂತರವಾಗಿ ಇರುತ್ತದೆಯೋ ಹಾಗೆಯೇ ಸೇವೆಯು ಸಹ ನಿರಂತರವಾಗಿ ಇರಬೇಕು. ನಿಮ್ಮನ್ನು ನೀವು ನಿರಂತರ ಸೇವಾಧಾರಿ ಎಂದು ಅನುಭವ ಮಾಡಿಕೊಳ್ಳುತ್ತಿದ್ದೀರಾ ಅಥವಾ ಎಂಟು ತಾಸು ಹತ್ತು ತಾಸು ಸೇವಾದಾರರೇ? ಪ್ರತಿಯೊಂದು ಶ್ವಾಸ,

ಪ್ರತಿಯೊಂದು ಕ್ಷಣ ಸ್ಮೃತಿ ಮತ್ತು ಸೇವೆ ಜೊತೆ ಜೊತೆಯೇ ಇರಬೇಕೇ ಅಥವಾ ಸ್ಮೃತಿಯ ತಾಸು(ಸಮಯ) ಬೇರೆ, ಸೇವೆಯ ಸಮಯ ಬೇರೆ ಇರುತ್ತದೆಯೇ? ಅಲ್ಲ ತಾನೇ. ಒಳ್ಳೆಯದು. ಸಮಾನತೆ ಇದೆ ಒಂದು ವೇಳೆ 100% ಸೇವೆ ಇದ್ದರೆ 100% ಸ್ಮೃತಿ ಇದೆಯೇ? ಎರಡರ ಸಮಾನತೆ ಇದೆಯೇ? ವ್ಯತ್ಯಾಸವಿರುತ್ತದೆ ಅಲ್ಲವೇ? ಕರ್ಮಯೋಗಿ ಎಂದರೆ ಕರ್ಮ ಮತ್ತು ಯೋಗ, ಸೇವೆ ಮತ್ತು ಸ್ಮೃತಿಯ ಸಮಾನತೆ ಇರಬೇಕು ಎಂದು ಅರ್ಥ. ಒಂದು ಸಮಯದಲ್ಲಿ ಸ್ಮೃತಿ ಹೆಚ್ಚಾಗಿ ಸೇವೆ ಕಡಿಮೆ ಎಂಬಂತೆ ಇರಬಾರದು ಅಥವಾ ಸೇವೆ ಹೆಚ್ಚಾಗಿ ಸ್ಮೃತಿ ಕಡಿಮೆ ಎಂಬಂತೆಯೂ ಇರಬಾರದು. ಬೇರೆಯಾಗಲು ಸಾಧ್ಯವೇ ಹಾಗೆಯೇ ಸ್ಮೃತಿ ಮತ್ತು ಸೇವೆ ಜೊತೆ ಜೊತೆಯೇ ಇರಬೇಕು. ಸ್ಮೃತಿ ಅರ್ಥಾತ್ ತಂದೆಯ ಸಮಾನವಾಗಿ, ಸ್ವಯಂನ ಸ್ವಮಾನ ಸಹ ಸ್ಮೃತಿಯಲ್ಲಿರಬೇಕು. ತಂದೆಯ ಸ್ಮೃತಿ ಇದ್ದಾಗ ಸ್ವಮಾನದ ಸ್ಮೃತಿಯೂ ಸಹ ಸ್ವತಹವಾಗಿಯೇ ಇರುತ್ತದೆ. ಒಂದು ವೇಳೆ ಸ್ವಮಾನದಲ್ಲಿ ಇರದಿದ್ದರೆ ಸ್ಮೃತಿ ಸಹ ಶಕ್ತಿಶಾಲಿಯಾಗಿ ಇರುವುದಿಲ್ಲ.

ಸ್ವಮಾನ ಅರ್ಥಾತ್ ತಂದೆಯ ಸಮಾನ. ಸಂಪೂರ್ಣ ಸ್ವಮಾನ -ತಂದೆಯ ಸಮಾನವಾಗಿ ತಯಾರಾಗುವುದು. ಹೀಗೆ ಸ್ಮೃತಿಯಲ್ಲಿ ಇರುವ ಮಕ್ಕಳು ಸದಾ ದಾತರಾಗಿಯೇ ಇರುತ್ತಾರೆ ಆದರೆ ತೆಗೆದುಕೊಳ್ಳುವವರಾಗಿ ಇರುವುದಿಲ್ಲ. ದೇವತೆ ಅರ್ಥಾತ್ ಕೊಡುವವರು(ದೇವತಾ ಅರ್ಥಾತ್ ದೇನೆವಾಲ). ಆದ್ದರಿಂದ ಇಂದು ಬಾಪ್‌ದಾದಾ ಮಕ್ಕಳೆಲ್ಲರ ದಾತ ಸ್ಥಿತಿಯನ್ನು ಪರಿಶೀಲನೆ ಮಾಡುತ್ತಿದ್ದಾರೆ. ದಾತನ ಮಕ್ಕಳು ಎಷ್ಟರವರೆಗೆ ದಾತರಾಗಿದ್ದಾರೆ ಎಂದು. ತಂದೆ ಯಾವಾಗಲೂ ಸಹ ಪಡೆಯಬೇಕು ಎಂಬ ಸಂಕಲ್ಪವನ್ನು ಮಾಡುವುದಿಲ್ಲ. ಕೊಡುವಂತಹ ಸಂಕಲ್ಪವನ್ನೇ ಮಾಡುತ್ತಾರೆ. ಹಳೆಯದೆಲ್ಲವುಗಳನ್ನು ಕೊಟ್ಟುಬಿಡಿ ಎಂದು ಕೇಳಿದ್ದರೂ ಸಹ ಅವುಗಳಿಗೆ ಬದಲಾಗಿ ಹೊಸವುಗಳನ್ನು ಕೊಡುತ್ತಾರೆ. ತಂದೆಯು ತೆಗೆದುಕೊಳ್ಳುವುದು ಅರ್ಥಾತ್ ಕೊಡುವುದು. ಆದ್ದರಿಂದ ವರ್ತಮಾನ ಸಮಯದಲ್ಲಿ ಬಾಪ್‌ದಾದಾರವರಿಗೆ ಮಕ್ಕಳ ಒಂದು ವಿಷಯ ಬಹಳ ಚೆನ್ನಾಗಿ ಎನಿಸಿತು. ಅದು ಯಾವ ವಿಷಯ? ವಿದೇಶಿಯರ ವಿಷಯ(ಟಾಪಿಕ್), ಅದು ಯಾವುದು? (ಸಮಯದ ಕರೆ). ಮಕ್ಕಳ ಸಲುವಾಗಿ ಸಮಯದ ಕರೆ ಏನು ಎಂದು ಬಾಪ್‌ದಾದಾ ನೋಡುತ್ತಿದ್ದಾರೆ. ನೀವಂತೂ ವಿಶ್ವದ ಸಲುವಾಗಿ, ಸೇವೆಯ ಸಲುವಾಗಿ ಸಮಯದ ಕರೆ ಏನು ಎಂದು ನೋಡುತ್ತಿದ್ದೀರಿ. ಬಾಪ್‌ದಾದಾರವರಂತೂ ಸೇವೆಗೆ ಸಹಯೋಗಿಯೇ ಆದರೆ ಮಕ್ಕಳ ಸಲುವಾಗಿ ಸಮಯದ ಕರೆ ಏನು ಎಂದು ನೋಡುತ್ತಿದ್ದಾರೆ. ಸಮಯದ ಕರೆ ಏನು ಎಂದು ನೀವು ಸಹ ಯೋಚಿಸುತ್ತಿದ್ದಿರಲ್ಲವೇ? ನಿಮ್ಮ ಸಲುವಾಗಿ ಯೋಚಿಸಬೇಡಿರಿ. ಸೇವೆಗಾಗಿ ಉಪನ್ಯಾಸವಂತೂ ಹೇಳುತ್ತಿದ್ದೀರಿ. ಹೇಳುತ್ತಿದ್ದೀರಲ್ಲವೇ? ಆದರೆ ನಮ್ಮ ಸಲುವಾಗಿ ಸಮಯದ ಕರೆ ಏನು ಎಂದು ನಿಮ್ಮನ್ನು ನೀವು ಕೇಳಿರಿ. ವರ್ತಮಾನ ಸಮಯದ ಕರೆ ಏನು ಎಂದು ಬಾಪ್‌ದಾದಾ ನೋಡುತ್ತಿದ್ದಾರೆ. **ಈಗ ಸಮಯವನ್ನು ಅನುಸರಿಸಿ ಪ್ರತಿಯೊಂದು ಸಮಯ, ಪ್ರತಿಯೊಬ್ಬ ಮಗುವಿಗೆ ದಾತ ಸ್ಥಿತಿಯ ಸ್ಮೃತಿ ಇನ್ನೂ ಹೆಚ್ಚಾಗಬೇಕು. ಸ್ವಉನ್ನತಿಯ ಪ್ರತಿ ದಾತನ ಸ್ಥಿತಿ, ಸರ್ವರ ಪ್ರತಿ ಸ್ನೇಹವೂ ಪ್ರತ್ಯಕ್ಷ ರೂಪದಲ್ಲಿ ಕಾಣಿಸಬೇಕು. ಯಾರು ಹೇಗಿದ್ದರೂ, ಏನಾದರೂ ಆಗಲಿ, ನಾನು ಕೊಡಬೇಕು ಎಂದುಕೊಳ್ಳಬೇಕು. ದಾತರು ಸದಾ ಬೇಹದ್ ವೈರಾಗ್ಯ ವೃತ್ತಿಯುಳ್ಳವರಾಗಿರುತ್ತಾರೆ. ಹದ್ದಿನಲ್ಲಿ ಇರುವುದಿಲ್ಲ ಮತ್ತು ಸಂಪನ್ನವಾಗಿ ಸಮೃದ್ಧಿಯಾಗಿ ಇರುತ್ತಾರೆ. ದಾತರು ಸದಾ ಮಾಸ್ಟರ್ ಕ್ಷಮಾ ಸಾಗರರಾಗಿ ಇರುತ್ತಾರೆ. ಈ ಕಾರಣದಿಂದ ಹದ್ದಿನಲ್ಲಿರುವ ತಮ್ಮ ಸಂಸ್ಕಾರಗಳು ಅಥವಾ ಇತರರ ಸಂಸ್ಕಾರಗಳು ಪ್ರತ್ಯಕ್ಷವಾಗುವುದಿಲ್ಲ ಗುಪ್ತವಾಗಿ ಬಿಡುತ್ತವೆ. ಯಾರು ಕೊಟ್ಟರೂ, ಕೊಡದೆ ಇದ್ದರೂ ನಾನು ಕೊಡಬೇಕು. ನಾನು ದಾತನಾಗಬೇಕು ಎಂದು ಸ್ಮೃತಿಯಲ್ಲಿಟ್ಟುಕೊಳ್ಳಬೇಕು. ಯಾವ ಸಂಸ್ಕಾರಕ್ಕೆ ಪರವಶವಾದ ಆತ್ಮಕ್ಕಾದರೂ ನಾನು ಸಹಯೋಗವನ್ನು ಕೊಡಬೇಕು. ಯಾರ ಹದ್ದಿನ ಸಂಸ್ಕಾರವೂ ನಿಮ್ಮ ಮೇಲೆ ಪ್ರಭಾವ ಬೀರಬಾರದು, ಯಾರು ಗೌರವವನ್ನು ಕೊಟ್ಟರೂ, ಕೊಡದೇ ಇದ್ದರೂ ನಾನು ಕೊಡಬೇಕು. ಈ ರೀತಿಯಾದ ದಾತ ಸ್ಥಿತಿ ಈಗ ಪ್ರತ್ಯಕ್ಷವಾಗಬೇಕು. ಮನಸ್ಸಿನಲ್ಲಿ**

**ಭಾವನೆಯಂತೂ ಇದೆ ಆದರೆ.... ಎಂಬ ಮಾತು ಬರಬಾರದು. ನಾನು ಮಾಡಲೇಬೇಕು ಯಾರಾದರೂ ಆ ರೀತಿಯಾದ ನಡವಳಿಕೆಯಿಂದ ನಡೆಯುತ್ತಿದ್ದರೂ, ಆ ಮಾತುಗಳನ್ನು ಮಾತನಾಡುತ್ತಿದ್ದರೂ, ಒಂದು ವೇಳೆ ಅವು ನಿಮಗೆ ಕೆಲಸಕ್ಕೆ ಬಾರದವುಗಳಾದರೆ, ಚೆನ್ನಾಗಿ ಅನಿಸದಿದ್ದರೆ ಅವುಗಳನ್ನು ತೆಗೆದುಕೊಳ್ಳಬೇಡರಿ. ಕೆಟ್ಟ ವಸ್ತುಗಳನ್ನು ತೆಗೆದುಕೊಳ್ಳುತ್ತೀರಾ? ಮನಸ್ಸಿನಲ್ಲಿ ಧಾರಣೆ ಮಾಡುವುದು ಅರ್ಥಾತ್ ಅವುಗಳನ್ನು ತೆಗೆದುಕೊಳ್ಳುವುದು. ಬುದ್ಧಿಯವರೆಗೆ ಕೂಡ ತರಬಾರದು.** ಬುದ್ಧಿಯವರಿಗೂ ಸಹ ಬರಬಾರದು. ಅದು ಕೆಟ್ಟ ವಿಷಯ, ಒಳ್ಳೆಯ ವಿಷಯ ಅಲ್ಲವಾದಾಗ ಅದನ್ನು ಮನಸ್ಸು, ಬುದ್ಧಿಯವರೆಗೆ ಬರಲು ಬಿಡಬೇಡಿರಿ ಅಥವಾ ಧಾರಣೆ ಮಾಡಬೇಡಿರಿ. ತೆಗೆದುಕೊಳ್ಳುವುದರ ಬದಲು ದಾತನಾಗಿ ಶುಭ ಭಾವನೆ, ಶುಭಕಾಮನೆಯನ್ನು ಕೊಡಿ ಮತ್ತು  ತೆಗೆದುಕೊಳ್ಳಿರಿ. ಏಕೆಂದರೆ ಈಗ ಸಮಯವನ್ನು ಅನುಸರಿಸಿ ಮನಸ್ಸು, ಬುದ್ಧಿ ಖಾಲಿಯಾಗಿ ಇರದಿದ್ದರೆ ನಿರಂತರ ಸೇವಾಧಾರಿಯಾಗಲು ಸಾಧ್ಯವಾಗುವುದಿಲ್ಲ. ಮನಸ್ಸು, ಬುದ್ಧಿ ಇತರ ವಿಷಯಗಳಲ್ಲಿ ಬಿಜಿ ಆಗಿಬಿಟ್ಟರೆ ಇನ್ನೇನು ಸೇವೆ ಮಾಡುತ್ತೀರಿ. ಲೌಕಿಕದಲ್ಲಿ ಕೆಲವರು 8 ಗಂಟೆಗಳು, 10 ಗಂಟೆಗಳು ಕೆಲಸ ಮಾಡುತ್ತಾರೆ. ಇಲ್ಲಿಯೂ ಸಹ ಈ ವಿಧವಾಗಿ ಆಗಿಬಿಡುತ್ತದೆ 8 ಗಂಟೆಗಳು ಅಥವಾ 6 ಗಂಟೆಗಳ ಸೇವಾಧಾರಿಯಾಗುತ್ತಾರೆ ಆದರೆ ನಿರಂತರ ಸೇವಾಧಾರಿ ಆಗಲಾಗುವುದಿಲ್ಲ. ಮನಸಾ ಸೇವೆಯನ್ನು ಮಾಡಿರಿ, ವಾಚಾ ಸೇವೆಯನ್ನು ಮಾಡಿರಿ, ಕರ್ಮ ಅರ್ಥಾತ್ ಸಂಬಂಧ, ಸಂಪರ್ಕಗಳಿಂದ ಸೇವೆಯನ್ನು ಮಾಡಿರಿ. ಆದರೆ ಪ್ರತಿಯೊಂದು ಕ್ಷಣ ದಾತ ಅರ್ಥಾತ್ ಸೇವಾದಾರಿಯಾಗಿರಿ. ಬುದ್ಧಿಯನ್ನು ಖಾಲಿಯಾಗಿ ಇಟ್ಟುಕೊಳ್ಳುವುದರಿಂದ ತಂದೆಯ ಸೇವೆಯಲ್ಲಿ ಸಹಯೋಗಿ ಆಗಬಲ್ಲಿರಿ. ಮನಸ್ಸನ್ನು ಸದಾ ಸ್ವಚ್ಛವಾಗಿ ಇಟ್ಟುಕೊಳ್ಳುವುದರಿಂದ ನಿರಂತರ ತಂದೆಯ ಸೇವೆಗೆ ಸಹಯೋಗಿ ಆಗಬಲ್ಲಿರಿ. ನಿಮ್ಮೆಲ್ಲರ ಪ್ರತಿಜ್ಞೆ ಏನು? ಜೊತೆಯೇ ಇರುತ್ತೇವೆ, ಜೊತೆಗೇ ಬರುತ್ತೇವೆ ಎಂದು ಪ್ರತಿಜ್ಞೆ ಮಾಡಿದ್ದೀರಲ್ಲವೇ ಅಥವಾ ನೀವು ಮುಂದೆ ಹೋಗಿ ಬಿಡಿ, ನಾವು ಹಿಂದೆ ಬರುತ್ತೇವೆ ಎಂದು ಹೇಳಿದ್ದೀರಾ? ಇಲ್ಲ ತಾನೇ? ಜೊತೆಯಲ್ಲಿಯೇ ಇರುವ ಪ್ರತಿಜ್ಞೆಯನ್ನು ಮಾಡಿದ್ದೀರಲ್ಲವೇ? ತಂದೆ ಸೇವೆ ಇಲ್ಲದೇ ಇರುತ್ತಾರೆಯೇ? ಸ್ಮೃತಿ ಇಲ್ಲದೇ ಸಹ ಇರುವುದಿಲ್ಲ. ತಂದೆಯ ಸ್ಮೃತಿಯಲ್ಲಿ ಎಷ್ಟು ಇರುತ್ತೀರೋ ಅಷ್ಟು ನೀವು ಶ್ರಮದಿಂದ ಮಾಡುತ್ತಿದ್ದೀರಿ. ಮಾಡುತ್ತಿದ್ದೀರಿ, ಆದರೆ ಶ್ರಮದಿಂದ, ಗಮನದಿಂದ ಮಾಡುತ್ತಿದ್ದೀರಿ. ತಂದೆಗಾಗಿ ಇನ್ನೇನಿದೆ? ತಂದೆಗಾಗಿ ಆತ್ಮರೇ ಇದ್ದಾರೆ. ಆತ್ಮನು ನಂಬರ್‌ವಾರ್ ಆದರೂ ಸಹ ತಂದೆಯು ಮಕ್ಕಳ ಸ್ಮೃತಿ ಇಲ್ಲದೇ ಇರುವುದಿಲ್ಲ. ತಂದೆ ತನ್ನ ಮಕ್ಕಳ ಸ್ಮೃತಿ ಇರದದೇ ಇರುತ್ತಾರೆಯೇ? ನೀವು ಇರುತ್ತೀರಾ? ಆಗಾಗ ತುಂಟ ಮಕ್ಕಳಂತೆ ಆಗಿಬಿಡುತ್ತಿದ್ದೀರಿ. ಏನು ಕೇಳಿದ್ದೀರಿ. ಸಮಯದ ಕರೆ-ದಾತರಾಗಿ. ಇದು ಬಹಳಷ್ಟು ಅವಶ್ಯಕವಾಗಿದೆ. ಎಲ್ಲರ ಕರೆ ಏನೆಂದರೆ- ಓ ನಮ್ಮ ಇಷ್ಟ ದೇವತೆಯರೇ! ಇಷ್ಟವಾದವರಲ್ಲವೇ ಯಾವುದೋ ಒಂದು ರೂಪದಲ್ಲಿ ಸರ್ವಾತ್ಮರಿಗೆ ಇಷ್ಟವಾದವರು. ಈಗ ಸರ್ವಾತ್ಮರ ಕರೆ- ಓ ಇಷ್ಟದೇವಿ ದೇವತಯರೇ ಪರಿವರ್ತನೆ ಮಾಡಿರಿ ಎಂದು. ಈ ಕರೆ ಕೇಳಿಸುತ್ತಿದೆಯಾ? ಪಾಂಡವರಿಗೆ ಈ ಕರೆ ಕೇಳಿಸುತ್ತಿದೆಯೇ? ಕೇಳಿ ಏನು ಮಾಡುತ್ತಿದ್ದೀರಿ. ಕೇಳುತ್ತಿದ್ದಾಗ ಮುಕ್ತಿಯನ್ನು ಕೊಡುತ್ತಿದ್ದೀರಾ ಅಥವಾ ಮಾಡೋಣ ಎಂದು ಯೋಚಿಸುತ್ತಿದ್ದೀರಾ? ಕರೆಯು ಕೇಳಿಸುತ್ತಿದೆಯೇ, ಸಮಯದ ಕರೆ ಕೇಳಿಸುತ್ತಿದ್ದೀರಿ ಮತ್ತು ಆತ್ಮರ ಕರೆಯನ್ನು ಕೇವಲ ಕೇಳಿ ಸುಮ್ಮನಾಗಿ ಬಿಡುತ್ತಿದ್ದೀರಾ. ಆದ್ದರಿಂದ ಇಷ್ಟ ದೇವತೆಯರೇ! ಈಗ ನಿಮ್ಮ ದಾತ ಸ್ಥಿತಿಯ ರೂಪವನ್ನು ಪ್ರತ್ಯಕ್ಷ ಮಾಡಿರಿ. ಎಲ್ಲರಿಗೂ ಕೊಡಬೇಕು. ಯಾವ ಆತ್ಮವೂ ವಂಚಿತವಾಗಬಾರದು. ಇಲ್ಲದಿದ್ದರೆ ನಿಂದೆಯ ಮಾಲೆಗಳು ಬೀಳುತ್ತವೆ. ನಿಂದಿಸುತ್ತಾರಲ್ಲವೇ ಆದ್ದರಿಂದ ನಿಂದೆಯ ಮಾಲೆಯನ್ನು ಧರಿಸುವ ಇಷ್ಟ ದೇವತೆಯರೇ ಅಥವಾ ಹೂವಿನ ಮಾಲೆಯನ್ನು ಧರಿಸುವ ಇಷ್ಟ ದೇವತೆಯರೇ? ಯಾರು?  ಪೂಜ್ಯರಲ್ಲವೇ? ನಾವು ಹಿಂದೆ ಬಂದಿರುವವರು ಎಂದು ತಿಳಿಯಬೇಡಿರಿ. ದೊಡ್ಡ ದೊಡ್ಡವರು ದಾತರಾಗುತ್ತಾರೆ ಆದರೆ ನಾವೆಲ್ಲಿ ಆಗುತ್ತೇವೆ ಎಂದು ತಿಳಿಯಬೇಡಿ. ಎಲ್ಲರೂ ದಾತರಾಗಬೇಕು.

ಯಾರಾದರೇ ಮೊದಲ ಬಾರಿ ಮಧುಬನಕ್ಕೆ ಬಂದಿದ್ದೀರೋ ಅವರು ಕೈಯನ್ನೆತ್ತಿರಿ! ಒಳ್ಳೆಯದು ಮೊದಲಬಾರಿ ಬಂದಿರುವವರು ದಾತರಾಗಬಲ್ಲಿರಾ ಅಥವಾ ಎರಡು ಮೂರು ವರ್ಷಗಳ ನಂತರ ಆಗುತ್ತೀರಾ? ಒಂದು ವರ್ಷದವರು ದಾತರಾಗಬಲ್ಲಿರಾ? (ಆಗಬಲ್ಲೆವು) ಬಹಳ ಬುದ್ಧಿಯುಳ್ಳವರು. ಬಾಪ್‌ದಾದಾ ಮಕ್ಕಳ ಧೈರ್ಯಕ್ಕೆ ಬಹಳ ಖುಷಿಪಡುತ್ತಿದ್ದಾರೆ. ಒಂದು ತಿಂಗಳದವರಾದರೂ, ಒಂದು ವರ್ಷದವರಾದರೂ ಅಥವಾ ಆರು ತಿಂಗಳದವರಾದರೂ ಆಗಲಿ ಬಾಪ್‌ದಾದಾರವರಿಗೆ ತಿಳಿದಿದೆ. ಒಂದು ತಿಂಗಳಾದರೂ ಆಗಲಿ ಸ್ವಯಂ ಬ್ರಹ್ಮಕುಮಾರಿ ಅಥವಾ ಬ್ರಹ್ಮ ಕುಮಾರನು ಎಂದು ಕರೆಯಿಸಿಕೊಳ್ಳುತ್ತಿದ್ದೀರಲ್ಲವೇ? ಆದ್ದರಿಂದ ಬ್ರಹ್ಮಕುಮಾರಿ, ಬ್ರಹ್ಮಕುಮಾರು ಅರ್ಥಾತ್ ಬ್ರಹ್ಮ ತಂದೆಯ ವಾರಸತ್ವಕ್ಕೆ(ಆಸ್ತಿ) ಅಧಿಕಾರಿ ಆಗಿಬಿಟ್ಟಿದ್ದೀರಿ. ಬ್ರಹ್ಮನನ್ನು ತಂದೆ ಎಂದು ಅಂಗೀಕರಿಸಿದ ನಂತರ ಕುಮಾರಿ, ಕುಮಾರರಾಗಿದ್ದೀರಲ್ಲವೇ ಆದ್ದರಿಂದ ಬ್ರಹ್ಮಕುಮಾರ ಬ್ರಹ್ಮಕುಮಾರಿಯರು ಬ್ರಹ್ಮಾ ತಂದೆ ಮತ್ತು ಶಿವ ತಂದೆಯ ವಾರಸತ್ವಕ್ಕೆ ಅಧಿಕಾರಿಯಾಗಿದ್ದಿರಲ್ಲವೇ ಅಥವಾ ಒಂದು ತಿಂಗಳಿನವರಿಗೆ ವಾರಸತ್ವ ಸಿಗುವುದಿಲ್ಲವೇ? ಬಂದು ತಿಂಗಳಾದರೂ ಅವರಿಗೆ ವಾರಸತ್ವ ಲಭಿಸುತ್ತದೆ. ವಾರಸತ್ವವನ್ನು ಕೊಡಲು ದಾತರಾಗುತ್ತೀರಲ್ಲವೇ! ಏನಾದರೆ ಲಭಿಸಿದೆಯೋ ಅದನ್ನು ಕೊಡಲು ಪ್ರಾರಂಭಿಸಬೇಕಲ್ಲವೇ? ತಂದೆ ಎಂದು ಭಾವಿಸಿ ಸಂಬಂಧವನ್ನು ಜೋಡಿಸಿದರೆ ಒಂದು ದಿನದಲ್ಲಿಯೂ ಸಹ ವಾರಸತ್ವವನ್ನು ಪಡೆಯಬಹುದು. ಚೆನ್ನಾಗಿದೆ, ಯಾವುದೋ ಒಂದು ಶಕ್ತಿ ಇದೆ... ಅರ್ಥವಾಗುತ್ತಿದೆ..... ಎಂದು ಕೇವಲ ಹೀಗೆನ್ನುವುದಲ್ಲ. ವಾರಸತ್ವಕ್ಕೆ ಅಧಿಕಾರಿಯಾದ ಮಕ್ಕಳು ಅರ್ಥ ಮಾಡಿಕೊಳ್ಳುವವರಾಗಿ ಮತ್ತು ನೋಡುವವರಾಗಿ ಇರುವುದಿಲ್ಲ. ಒಂದು ದಿನದಲ್ಲಿಯೂ ಸಹ ಮನಸ್ಸಿನಿಂದ ತಂದೆ ಎಂದು ಅಂಗೀಕರಿಸಿದರೆ ನೀವೆಲ್ಲರೂ ಅಧಿಕಾರಿಗಳೇ ತಾನೇ! ನೀವೆಲ್ಲರೂ ಬ್ರಹ್ಮಕುಮಾರಿ, ಬ್ರಹ್ಮಕುಮಾರರೇ ತಾನೇ ಅಥವಾ ಆಗುತ್ತಿದ್ದೀರಾ? ಆಗಿಬಿಟ್ಟಿದ್ದೀರಾ ಅಥವಾ ಆಗಲು ಬಂದಿದ್ದೀರಾ? ಯಾರು ನಿಮ್ಮನ್ನು ಬದಲಾಯಿಸಲು ಸಾಧ್ಯವಿಲ್ಲ ತಾನೇ? ಬ್ರಹ್ಮಕುಮಾರಿ ಕುಮಾರನ ಬದಲು ಕೇವಲ ಕುಮಾರಿ ಕುಮಾರರಾಗಿರಿ ಎಂದರೆ ಆಗಲಾರಿರಾ? ಬ್ರಹ್ಮಕುಮಾರಿ, ಬ್ರಹ್ಮಕುಮಾರರಾಗುವುದರಲ್ಲಿ ಎಷ್ಟು ಲಾಭವಿದೆ. ಒಂದು ಜನ್ಮಕ್ಕಾಗಿ ಅಲ್ಲ ಅನೇಕ ಜನ್ಮಕ್ಕಾಗಿ ಲಾಭವಿದೆ. ಅರ್ಧ ಜನ್ಮ ಅಥವಾ ಕಾಲು ಜನ್ಮಕ್ಕಾಗಿ ಪುರುಷಾರ್ಥವನ್ನು ಮಾಡುತ್ತಿದ್ದೀರಿ. ಪ್ರಾಪ್ತಿ ಅನೇಕ ಜನ್ಮಗಳಿಗಾಗಿ ಪಡೆಯುತ್ತಿದ್ದೀರಿ. ಲಾಭವೇ ಲಾಭವಲ್ಲವೇ!

ಬಾಪ್‌ದಾದಾ ಸಮಯವನ್ನು ಅನುಸರಿಸಿ ವರ್ತಮಾನ ಸಮಯದಲ್ಲಿ ವಿಶೇಷವಾಗಿ ಒಂದು ವಿಷಯದ ಮೇಲೆ ಗಮನವನ್ನು ಸೆಳೆಯುತ್ತಿದ್ದಾರೆ. ಏಕೆಂದರೆ ಬಾಪ್‌ದಾದಾ ಮಕ್ಕಳ ಫಲಿತಾಂಶವನ್ನು ನೋಡುತ್ತಿರುತ್ತಾರೆ. ಆದ್ದರಿಂದ ಫಲಿತಾಂಶದಲ್ಲಿ ಏನು ನೋಡಿದರು ಧೈರ್ಯ ಚೆನ್ನಾಗಿದೆ, ಲಕ್ಷ್ಯವೂ ಚೆನ್ನಾಗಿದೆ. ಆದರೆ ಲಕ್ಷ್ಯವನ್ನು ಅನುಸರಿಸಿ ಲಕ್ಷ್ಯ ಮತ್ತು ಲಕ್ಷಣಗಳಲ್ಲಿ ಈಗಿನವರೆಗೂ ವ್ಯತ್ಯಾಸವಿದೆ. ಲಕ್ಷ್ಯ ಎಲ್ಲರಿಗೂ ನಂಬರ್‌ವನ್ ಆಗಬೇಕು ಎಂದಿದೆ. ಬಾಪ್‌ದಾದಾ ಯಾರನ್ನಾದರೂ ನಿಮ್ಮ ಲಕ್ಷ್ಯ 21 ಜನ್ಮಗಳ ಭಾಗ್ಯವನ್ನು ಪಡೆಯಬೇಕೆಂದಿದೆಯೋ, ಸೂರ್ಯವಂಶಿಯಾಗಬೇಕೆಂದೋ ಅಥವಾ ಚಂದ್ರವಂಶಿಯಾಗಬೇಕೆಂದು ಇದೆಯೋ? ಎಂದು ಕೇಳಿದರೆ ಎಲ್ಲರೂ ಯಾವುದರಲ್ಲಿ ಕೈ ಎತ್ತುತ್ತಾರೆ? ಸೂರ್ಯವಂಶದಲ್ಲಿ ಎಂದು ಕೈ ಎತ್ತುತ್ತಾರೆ ತಾನೆ. ಚಂದ್ರವಂಶಿ ಆಗಬೇಕೆಂದುಕೊಂಡವರು ಯಾರಾದರೂ ಇದ್ದಾರೆಯೇ? ಯಾರಾದರೂ ಹೀಗೆ ತಿಳಿಯುವವರು ಇದ್ದೀರಾ? ಹಿಂದೆ ಕುಳಿತಿರುವವರು ಯಾರಾದರೂ ಇದ್ದೀರಾ? ರಾಮನಾಗುವವರು ಯಾರಾದರೂ ಇದ್ದೀರಾ? ಯಾರು ಇಲ್ಲವೇ? ಒಬ್ಬರಾದರೂ ಆಗಿರಿ. ಯಾರೋ ಒಬ್ಬರು ರಾಮನಂತೂ ಆಗಲೇಬೇಕಲ್ಲವೇ! (ಒಬ್ಬರು ಕೈಯನ್ನು ಎತ್ತಿದರು). ಒಳ್ಳೆಯದು. ಇಲ್ಲದಿದ್ದರೆ ರಾಮನ ಸೀಟ್ ಖಾಲಿಯಾಗಿ ಉಳಿದು ಬಿಡುತ್ತದೆ ಆದ್ದರಿಂದ ಲಕ್ಷ್ಯವೆಲ್ಲರಿಗೂ ಚೆನ್ನಾಗಿದೆ. ಲಕ್ಷ್ಯ

ಮತ್ತು ಲಕ್ಷಣಗಳಲ್ಲಿ ಸಮಾನತೆಯ ಮೇಲೆ ಗಮನವಿಡುವ ಅವಶ್ಯಕತೆ ಇದೆ. ಇದಕ್ಕೆ ಕಾರಣವೇನು ಎಂದು ತಿಳಿಸಿದ್ದೇನಲ್ಲವೇ ಆಗಾಗ ಪಡೆಯುವವರಾಗಿ ಬಿಡುತ್ತಿದ್ದೀರಿ ಇದು ಆಗಬೇಕು, ಇವರು ಮಾಡಬೇಕು, ಇವರು ಸಹಾಯ ಮಾಡಬೇಕು, ಇವರು ಬದಲಾದರೆ ನಾನು ಬದಲಾಗುತ್ತೇನೆ, ಈ ವಿಷಯ ಸರಿಹೋದರೆ ನಾನು ಸರಿಹೋಗುತ್ತೇನೆ. ಹೀಗೆ ಎನ್ನುವುದು ಅರ್ಥಾತ್ ಪಡೆಯುವವರಾಗುವುದು. ದಾತ ಸ್ಥಿತಿಯಲ್ಲ, ಯಾರು ಕೊಟ್ಟರೂ ಕೊಡದೇ ಇದ್ದರೂ ತಂದೆಯಂತೂ ಎಲ್ಲಾ ಕೊಟ್ಟುಬಿಟ್ಟಿದ್ದಾರೆ. ತಂದೆ ಕೆಲವರಿಗೆ ಕಡಿಮೆ, ಕೆಲವರಿಗೆ ಹೆಚ್ಚು ಕೊಟ್ಟಿದ್ದಾರೆಯೇ? ಕೋರ್ಸ್ ಎಲ್ಲರಿಗೂ ಒಂದೇ ಅಲ್ಲವೇ? 60 ವರ್ಷಗಳವರಾದರೂ, ಒಂದು ತಿಂಗಳದವರಾದರೂ ಎಲ್ಲರಿಗೂ ಕೋರ್ಸ್ ಒಂದೇ ತಾನೇ. ಅಥವಾ 60 ವರ್ಷಗಳಿರುವವರಿಗೆ ಬೇರೆ ಕೋರ್ಸ್, ಒಂದು ತಿಂಗಳದವರಿಗೆ ಬೇರೆ ಕೋರ್ಸ್ ಇದೆಯೇ? ಅವರು ಕೂಡ ಅದೇ ಕೋರ್ಸನ್ನು ಪಡೆಯುತ್ತಿದ್ದಾರೆ. ಈಗಲೂ ಕೂಡ ಅದೇ ಕೋರ್ಸ್, ಅದೇ ಜ್ಞಾನ, ಅದೇ ಪ್ರೀತಿ, ಅದೇ ಸರ್ವಶಕ್ತಿಗಳು. ಎಲ್ಲಾ ಒಂದೇ ವಿಧವಾದವುಗಳಿವೆ. ಅವರಿಗೆ 16 ಶಕ್ತಿಗಳು, ಇವರಿಗೆ 8 ಶಕ್ತಿಗಳಲ್ಲ. ಎಲ್ಲರಿಗೂ ಒಂದೇ ರೀತಿಯಾದ ವಾರಸತ್ವ ಲಭಿಸುತ್ತದೆ. ಎಲ್ಲರನ್ನೂ ಸಂಪನ್ನವಾಗಿ ಮಾಡಿದಾಗ ಸಂಪನ್ನವಾಗಿರುವ ಆತ್ಮ ದಾತನಾಗುತ್ತದೆ. ಆದರೆ ಪಡೆಯುವವರಾಗುವುದಿಲ್ಲ. ನಾನು ಕೊಡಬೇಕು ಎಂಬ ಭಾವನೆ ಇರುತ್ತದೆ. ಯಾರು ಕೊಟ್ಟರೂ, ಕೊಡದೇ ಇದ್ದರೂ ಪಡೆಯುವ ಇಚ್ಛೆ ಇರುವುದಿಲ್ಲ. ಕೊಡಬೇಕೆಂಬ ಇಚ್ಛೆಯಲ್ಲಿ ಇರುತ್ತಾರೆ ಮತ್ತು ಎಷ್ಟು ಕೊಡುತ್ತಾ ಇರುತ್ತಾರೆಯೋ, ದಾತರಾಗುತ್ತಾರೆಯೋ ಖಾಜಾನೆಯು ಅಷ್ಟು ಹೆಚ್ಚಾಗುತ್ತಾ ಇರುತ್ತದೆ. ಯಾರಿಗಾದರೂ ನೀವು ಸ್ವಾಮಾನ(ಗೌರವ) ಕೊಟ್ಟಿದ್ದೀರಿ. ಇತರರಿಗೆ ಕೊಡುವುದು ಅರ್ಥಾತ್ ನಿಮ್ಮ ಸ್ವಮಾನವನ್ನು ಬೆಳೆಸಿಕೊಳ್ಳುವುದು. ಇದು ಕೊಟ್ಟ ಹಾಗೆ ಅಲ್ಲ ಕೊಡುವುದು ಅರ್ಥಾತ್ ಪಡೆಯುವುದು. ತೆಗೆದುಕೊಳ್ಳಬೇಡಿರಿ. ಕೊಡುತ್ತಲೇ ಇರಿ ಇದೇ ತೆಗೆದುಕೊಳ್ಳುವುದಾಗಿಬಿಡುತ್ತದೆ. ಸಮಯದ ಕರೆ ಏನು ಎಂದು ತಿಳಿಯಿತೇ? ದಾತರಾಗಿ. ಈ ಒಂದೇ ಪದವನ್ನು ಸ್ಮೃತಿಯಲ್ಲಿಟ್ಟುಕೊಳ್ಳಬೇಕು. ಯಾವ ಸಂಘಟನೆಯಾದರೂ ನಡೆಯಲಿ 'ದಾತ' ಎಂಬ ಶಬ್ದವನ್ನು ಸದಾ ಸ್ಮೃತಿಯಲ್ಲಿ ಇಟ್ಟುಕೊಳ್ಳಬೇಕು. ಸ್ಥೂಲವಾಗಿ ಮತ್ತು ಸೂಕ್ಷ್ಮವಾಗಿಯೂ ಪಡೆಯಬೇಕೆಂಬ ಇಚ್ಛೆ ಇರಬಾರದು. ದಾತ ಅರ್ಥಾತ್ ಇಚ್ಛಾ ಮಾತ್ರಂ ಅವಿದ್ಯಾ ಎಂದರ್ಥ. ಸಂಪನ್ನವಾಗಿ ಇರುತ್ತೀರಿ. ತೆಗೆದುಕೊಳ್ಳಬೇಕೆಂಬ ಇಚ್ಛೆ ಬರಲು ಅವರಿಗೆ ಯಾವ ಕೊರತೆಯ ಅನುಭವವೂ ಆಗುವುದಿಲ್ಲ. ಸರ್ವಪ್ರಾಪ್ತಿ ಸಂಪನ್ನವಾಗಿ ಇರುತ್ತಾರೆ. ಆದರೆ ಲಕ್ಷ್ಯವೇನು? ಸಂಪನ್ನವಾಗಿ ಆಗಬೇಕೆಂದಲ್ಲವೇ ಅಥವಾ ಎಷ್ಟು ಲಭಿಸಿದರೆ ಅಷ್ಟು ಸಾಕಾಗುತ್ತದೆಯೇ? ಸಂಪನ್ನರಾಗುವುದೇ ಸಂಪೂರ್ಣ ರಾಗುವುದು. ಇಂದು ವಿಶೇಷವಾಗಿ ಡಬಲ್ ವಿದೇಶಿಯರಿಗೆ ಅವಕಾಶ ಲಭಿಸಿದೆ. ಒಳ್ಳೆಯದು, ಮೊದಲ ಅವಕಾಶ ವಿದೇಶಿಯರೇ ತೆಗೆದುಕೊಂಡಿದ್ದಾರೆ. ಮುದ್ದಾದ ಮಕ್ಕಳಲ್ಲವೇ! ಎಲ್ಲರನ್ನೂ ಬೇಡ ಎಂದಿದ್ದಾರೆ, ಅವರನ್ನು ಮಾತ್ರ ಆಹ್ವಾನಿಸಿದ್ದಾರೆ. ಬಾಪ್‌ದಾದಾರವರಿಗೆ ಸಹ ಮಕ್ಕಳೆಲ್ಲರೂ ಸ್ಮೃತಿ ಇರುತ್ತಾರೆ. ಆದರೂ ಸಹ ಡಬಲ್ ವಿದೇಶಿ ಮಕ್ಕಳನ್ನು ನೋಡಿ, ಅವರ ಧೈರ್ಯವನ್ನು ನೋಡಿ ಬಹಳ ಖುಷಿ ಪಡುತ್ತಿದ್ದಾರೆ. ಈಗ ವರ್ತಮಾನ ಸಮಯದಲ್ಲಿ ಹೆಚ್ಚು ಏರುಪೇರಿನಲ್ಲಿ ಬರುತ್ತಿಲ್ಲ. ಈಗ ವ್ಯತ್ಯಾಸ ಬಂದುಬಿಟ್ಟಿದೆ. ಆದಿಯಲ್ಲಿ ಪ್ರಶ್ನೆಗಳು ಇರುತ್ತಿದ್ದವು. ಇದು ಭಾರತೀಯ ಸಂಸ್ಕೃತಿ, ಇದು ವಿದೇಶಿ ಸಂಸ್ಕೃತಿ ಎಂದು ಆದರೆ ಈಗ ಅರ್ಥವಾಗಿಬಿಟ್ಟಿದೆ. ಈಗ ಬ್ರಾಹ್ಮಣ ಸಂಸ್ಕೃತಿಯಲ್ಲಿ ಬಂದುಬಿಟ್ಟಿದ್ದಾರೆ. ಭಾರತೀಯ ಸಂಸ್ಕೃತಿ ಇಲ್ಲ, ವಿದೇಶಿ ಸಂಸ್ಕೃತಿಯೂ ಇಲ್ಲ, ಬ್ರಾಹ್ಮಣ ಸಂಸ್ಕೃತಿಯಲ್ಲಿ ಬಂದುಬಿಟ್ಟಿದ್ದಾರೆ. ಭಾರತೀಯ ಸಂಸ್ಕೃತಿ ಸ್ವಲ್ಪ ಜಗಳ ತರುತ್ತದೆ. ಆದರೆ ಬ್ರಾಹ್ಮಣ ಸಂಸ್ಕೃತಿ ಸಹಜವಲ್ಲವೇ? ಬ್ರಾಹ್ಮಣ ಸಂಸ್ಕೃತಿ ಏನೆಂದರೆ ಸ್ವಮಾನದಲ್ಲಿ ಇರಿ ಮತ್ತು ಸ್ವರಾಜ್ಯ ಅಧಿಕಾರಿಯಾಗಿರಿ. ಇದೇ ಬ್ರಾಹ್ಮಣರ ಸಂಸ್ಕೃತಿ ಇದು ಇಷ್ಟವೇ ತಾನೇ? ಭಾರತೀಯ ಸಂಸ್ಕೃತಿ ಹೇಗೆ ಬರುತ್ತದೆ ಕಷ್ಟವೆಂಬ ಪ್ರಶ್ನೆಗಳೇನು ಇಲ್ಲ ತಾನೇ! ಸಹಜವಾಗಿ ಬಿಟ್ಟಿದೆ ಅಲ್ಲವೇ? ಮತ್ತೆ ಅಲ್ಲಿಗೆ ಹೋದ ನಂತರ ಸ್ವಲ್ಪ ಕಷ್ಟ ಎಂದು ಬರೆಯಬಾರದು. ಸಹಜವಾಗಿದೆ ಎಂದು ಹೇಳಿಬಿಟ್ಟಿದ್ದೀರಿ ಆದರೆ ಸ್ವಲ್ಪ ಕಷ್ಟವೆನಿಸುತ್ತದೆಯೇ? ಸಹಜವೇನಾ? ಸ್ವಲ್ಪ ಸ್ವಲ್ಪ

ಕಷ್ಟವೇ? ಸ್ವಲ್ಪ ಕೂಡ ಕಷ್ಟವಿಲ್ಲವೇ? ಬಹಳ ಸಹಜವೇ? ಆಟವೆಲ್ಲಾ ಪೂರ್ತಿಯಾಗಿ ಬಿಡುತ್ತದೆ ಆದ್ದರಿಂದ ನಗು ಬರುತ್ತದೆ. ಈಗ ಪಕ್ಕಾ ಆಗಿಬಿಟ್ಟಿದ್ದೀರಿ. ಚಿಕ್ಕ ಮಕ್ಕಳ ಆಟಗಳು ಸಮಾಪ್ತಿಯಾಗಿ ಬಿಟ್ಟಿವೆ. ಈಗ ಅನುಭವಿಯಾಗಿ ಬಿಟ್ಟಿದ್ದೀರಿ. ಬಾಪ್‌ದಾದಾ ನೋಡುತ್ತಿದ್ದಾರೆ- ಹಳೆಯವರು ಎಷ್ಟೆಷ್ಟು ಪಕ್ಕಾ ಆಗುತ್ತಾ ಇರುತ್ತಾರೆಯೋ ಅಷ್ಟಷ್ಟು ಹೊಸಬರಾಗಿ ಬಂದವರು ಸಹ ಪಕ್ಕಾ ಆಗಿಬಿಡುತ್ತಾರೆ. ಒಬ್ಬರನ್ನೊಬ್ಬರು ಚೆನ್ನಾಗಿ ಮುಂದಕ್ಕೆ ಕರೆದೊಯ್ಯುತ್ತಿದ್ದಾರೆ. ಚೆನ್ನಾಗಿ ಶ್ರಮಿಸುತ್ತಿದ್ದಾರೆ. ದಾದಿಯರ ಹತ್ತಿರ ಜಗಳದ ಕಥೆಗಳನ್ನು ತರುತ್ತಿಲ್ಲ ತಾನೇ? ಜಗಳದ ಕಥೆಗಳು ದಾದಿಯಾರ ಹತ್ತಿರ ತರುತ್ತಿದ್ದೀರಾ? ಕಡಿಮೆಯಾಗಿ ಬಿಟ್ಟಿದೆಯಾ! ವ್ಯತ್ಯಾಸ ಬಂದಿದೆ ಅಲ್ಲವೇ! (ಜಾನಕಿ ದಾದಿಯೊಂದಿಗೆ) ಈಗ ನೀವು ಅನಾರೋಗ್ಯದಿಂದ ಇಲ್ಲ ತಾನೇ? ಜಗಳಗಳ ಕಥೆಗಳಿಂದ ಅನಾರೋಗ್ಯ ಬರುತ್ತದೆ, ಒಳ್ಳೆಯದು. ಎಲ್ಲರಲ್ಲಿ ಎಲ್ಲದಕ್ಕಿಂತಲೂ ವಿಶೇಷ ಗುಣ - ಮನಸ್ಸಿನ ಸ್ವಚ್ಛತೆ. ಒಳಗಡೆ ಏನು ಇಟ್ಟುಕೊಳ್ಳುವುದಿಲ್ಲ ಎಲ್ಲವೂ ಹೇಳಿಬಿಡುತ್ತಾರೆ. ಯಾವ ವಿಷಯವಾದರೂ ಸತ್ಯವಾದ ಮನಸ್ಸಿನಿಂದ ಹೇಳಿಬಿಡುತ್ತಾರೆ. ಹೀಗೆ ಅಲ್ಲ ಹೀಗೆ.... ಎಂದು ಸುಳ್ಳು ಹೇಳುವುದಿಲ್ಲ. ಇರುವ ವಿಷಯವನ್ನೇ ಹೇಳಿಬಿಡುತ್ತಾರೆ. ಈ ವಿಶೇಷತೆ ಬಹಳ ಚೆನ್ನಾಗಿದೆ ಆದ್ದರಿಂದಲೇ ತಂದೆಯು ಹೇಳುತ್ತಾರೆ. ಸತ್ಯವಾದ ಮತ್ತು ಸ್ವಚ್ಛವಾದ ಹೃದಯಕ್ಕೆ ಪ್ರಭು ಪ್ರಸನ್ನರಾಗುತ್ತಾರೆ. ಮಾಡುತ್ತೇವೆ ಎಂದರೆ ಮಾಡುತ್ತೇವೆ ಎನ್ನುತ್ತಾರೆ. ಇಲ್ಲದಿದ್ದರೆ ಇಲ್ಲ ಎಂದು ಹೇಳುತ್ತಾರೆ, ನೋಡುತ್ತೇವೆ ಎಂದು ಹೇಳುವುದಿಲ್ಲ ಕಷ್ಟದಿಂದ ನಡೆಯುವುದಿಲ್ಲ. ನಡೆದರೆ ಪೂರ್ತಿಯಾಗಿ ನಡೆಯುತ್ತಾರೆ, ಇಲ್ಲದಿದ್ದರೆ ಇಲ್ಲ.

ಬಾಪ್‌ದಾದಾ ದೇಶ ವಿದೇಶಗಳ ಮೀಟಿಂಗನ್ನು ನೋಡಿದ್ದರು. ಬಹಳ ಮೀಟಿಂಗ್ಗಳನ್ನು ಮಾಡಿದ್ದೀರಲ್ಲವೇ! ಸಮಯವನ್ನು ತೆಗೆದು ಎಲ್ಲರೂ ಪ್ಲಾನ್ ಅನ್ನು ತಯಾರು ಮಾಡಿದ್ದೀರಿ, ಚೆನ್ನಾಗಿ ಶ್ರಮಿಸಿದ್ದೀರಿ ಮತ್ತು ಚೆನ್ನಾಗಿ ಸಂಘಟನೆ ಮಾಡಿದ್ದೀರಿ. ಇದಕ್ಕೆ ಬಾಪ್‌ದಾದಾ ಖುಷಿಪಡುತ್ತಿದ್ದಾರೆ. ಸಂಘಟನೆಯಿಂದ ಯಾವ ಕಾರ್ಯವಾದರೂ ಸಹಜವಾಗಿ ಸಫಲವಾಗುತ್ತದೆ. ಡಬಲ್ ವಿದೇಶಿಯರು ಮೀಟಿಂಗ್ ನಲ್ಲಿ ಸಂಘಟನಾ ಶಕ್ತಿಯ ಪ್ರತ್ಯಕ್ಷ ಸ್ವರೂಪವನ್ನು ತೋರಿಸಿದರು. ಧೈರ್ಯದಿಂದ ಮತ್ತು ಶ್ರಮಿಸಿ ಮಕ್ಕಳು ತಯಾರು ಮಾಡಿರುವ ಪ್ಲಾನ್ ಅನ್ನು ನೋಡಿ ಬಾಪ್‌ದಾದಾ ಖುಷಿ ಪಡುತ್ತಿದ್ದಾರೆ. ಆರ್, ಸಿ, ಓ ಗ್ರೂಪ್ ನವರು ವಿಶೇಷ ಸೇವೆಗಾಗಿ ಬಂದಿದ್ದಾರೆ. ಹಾಗೆ ಬಂದಿರುವ ಆರ್, ಸಿ, ಒ ಗ್ರೂಪ್ (5 ಖಂಡಗಳಿಂದ ಸೇವೆಗೆ ಬಂದಿರುವ ನಿಮಿತ್ತ ಮುಖ್ಯ ಸಹೋದರಿ ಸಹೋದರಿಯರು) ಅವರೆಲ್ಲರಿಗೆ ಬಾಪ್‌ದಾದಾ ಶುಭಾಶಯಗಳನ್ನು ಕೊಡುತ್ತಿದ್ದಾರೆ. ಒಳ್ಳೊಳ್ಳೆಯ ಪ್ಲಾನ್ಸ್ ಅನ್ನು ತಯಾರು ಮಾಡಿದ್ದಾರೆ. ಎಲ್ಲಿ ಯಾವ ರೀತಿಯಾಗಿ ನಡೆಯಬಲ್ಲಿರೋ, ಎಷ್ಟು ನಡೆಯಬಲ್ಲಿರೋ ಅಷ್ಟು ನಡೆಸಿರಿ. ದೊಡ್ಡ ಪಟ್ಟಣ ಮತ್ತು ಚಿಕ್ಕಪಟ್ಟಣಗಳಿಗೆ ವ್ಯತ್ಯಾಸವಂತೂ ಇರುತ್ತದೆ ಅಲ್ಲವೇ! ಆದ್ದರಿಂದ ಎಷ್ಟು ಧೈರ್ಯವನ್ನಿಟ್ಟು ಸಮಯವನ್ನು ಉಪಯೋಗಿಸಿ ಶ್ರಮಿಸುತ್ತಿರೋ ಅಷ್ಟು ಅವುಗಳನ್ನು ಪ್ರತ್ಯಕ್ಷದಲ್ಲಿ ತನ್ನಿರಿ. ಕೇವಲ ಒಂದು ವಿಷಯವನ್ನು ಸ್ಮೃತಿ ಇಟ್ಟುಕೊಳ್ಳಬೇಕು ಸೇವೆ ಮತ್ತು ಸ್ವಉನ್ನತಿಯ ಸಮಾನತೆಯಲ್ಲಿ ವ್ಯತ್ಯಾಸ ಇರಬಾರದು. ಬಂದ ನಂತರ ಸೇವೆಯಲ್ಲಿ ಬಿಸಿಯಾದ ಕಾರಣ ಸ್ವಉನ್ನತಿಯಲ್ಲಿ ವ್ಯತ್ಯಾಸ ಬಂದುಬಿಟ್ಟಿದೆ ಎಂದುಕೊಳ್ಳುವುದಲ್ಲ. ಎರಡರ ಸಮಾನತೆಯನ್ನು ಸದಾ ಇಟ್ಟುಕೊಳ್ಳಬೇಕು. ಏಕೆ? ಇತರರ ಸೇವೆಯನ್ನು ಮಾಡಿ ಸ್ವಯಂನ ಸೇವೆ ಇಲ್ಲದಿದ್ದರೆ ಅದು ಚೆನ್ನಾಗಿರುವುದಿಲ್ಲ. ಎರಡರ ಸಮಾನತೆ ಇಟ್ಟುಕೊಳ್ಳುವುದೇ ಸಫಲತೆ. ಒಳ್ಳೆಯದು.

ಆರ್, ಸಿ, ಒ ನಿಂದ ಬಂದಿರುವವರು ಕೈಯನ್ನೆತ್ತಿರಿ. ಇಂಟರ್ನ್ಯಾಷನಲ್ ಸರ್ವಿಸ್ ಗ್ರೂಪ್ (ಅಂತರ್ರಾಷ್ಟ್ರೀಯ ಸೇವಾ ಸಂಘ) ಅವರು ಕೂಡ ಕೈಯನ್ನು ಎತ್ತಿರಿ. ಒಳ್ಳೆಯದು, ಶುಭಾಶಯಗಳು. ಸಮಯವನ್ನು ತೆಗೆದು ಭಟ್ಟಿಯಲ್ಲಿ ಕುಳಿತಿದ್ದೀರಿ, ಒಳ್ಳೆಯದು. ಮಧುಬನದಲ್ಲಿ ಅವಕಾಶವೂ ಸಿಕ್ಕಿದೆ ಒಳ್ಳೆಯದು. ಎಲ್ಲರೂ ಒಬ್ಬರನ್ನೊಬ್ಬರು ಸಹ ಭೇಟಿ ಮಾಡುತ್ತೀರಿ. ಎಲ್ಲಾ ಕಡೆಯ ಸಮಾಚಾರ ಎಲ್ಲರಿಗೂ ಲಭಿಸುತ್ತದೆ ಆದ್ದರಿಂದ

ಶುಭಾಶಯಗಳು, ಚೆನ್ನಾಗಿ ಮಾಡಿದ್ದೀರಿ. ಎಲ್ಲರೂ ಯಾರು ಎಲ್ಲಿಂದ ಬಂದಿದ್ದೀರೋ ಎಲ್ಲರಿಗೂ ಬಾಪ್‌ದಾದಾ ಸ್ನೇಹಪೂರ್ವಕ ಶುಭಾಶಯಗಳನ್ನು ಕೊಡುತ್ತಿದ್ದಾರೆ. ಎಲ್ಲರೂ ಪ್ರಿಯ ಸ್ಮೃತಿಯನ್ನು, ಉತ್ತರಗಳನ್ನು ಬಹಳ ಕಳುಹಿಸಿದ್ದಾರೆ ಎಂಬ ಸಮಾಚಾರವೂ ಬಂದಿದೆ. ಆದ್ದರಿಂದ ಬಾಪ್‌ದಾದಾರವರಂತೂ ಉತ್ತರ ತಲುಪುವ ಮುನ್ನವೇ ಪ್ರಿಯಸ್ಮೃತಿಗಳನ್ನು ಕೊಡುತ್ತಿದ್ದಾರೆ. ನೀವು ಉತ್ತರ ಬರೆಯಬೇಕೆಂದು ಸಂಕಲ್ಪವನ್ನು ಮಾಡಿದ್ದೀರಿ, ಆ ಸಂಕಲ್ಪವು ವಿಜ್ಞಾನ ಸಾಧನಗಳಿಂದ ಉತ್ತರ ಸೇರುವ ಮುಂಚೆಯೇ ತಲುಪಿಬಿಡುತ್ತದೆ. ಎಲ್ಲದಕ್ಕಿಂತಲೂ ವೇಗವಾಗಿ ಇ-ಮೇಲ್ ತಲುಪುತ್ತದೆ ಆದ್ದರಿಂದ ಇ ಮೇಲ್ ಕೊಡುವುದನ್ನು ಪ್ರಾರಂಭಿಸಿದ್ದಾರೆ ಆದರೆ ಅದಕ್ಕಿಂತಲೂ ಮೊದಲೇ ನಿಮ್ಮ ಸಂಕಲ್ಪವು ಬಾಪ್‌ದಾದಾರವರ ಹತ್ತಿರ ತಲುಪುತ್ತದೆ. ಈ ಸಾಧನಗಳೆಲ್ಲವೂ ಸೇವೆಗಾಗಿ ಸಹಯೋಗ ಕೊಡಲು ಲಭಿಸಿದೆ. ಇದು ಇ-ಮೇಲ್ ಇದು ಹೀಗಿದೆ...ಎಂದು ಇವುಗಳ ಸಮಾಚಾರ ಬ್ರಹ್ಮಾ ತಂದೆಯು ಕೇಳಿಸಿಕೊಂಡಾಗ ವಾಹ್! ಮಕ್ಕಳೇ ವಾಹ್!! ಎಂದು ಖುಷಿ ಪಡುತ್ತಿದ್ದಾರೆ. ಇಷ್ಟು ಸಹಜ ಸಾಧನಗಳು ಸಾಕಾರದಲ್ಲಿ ಬ್ರಹ್ಮಾತಂದೆಗೂ ಲಭಿಸಲಿಲ್ಲ ಆದರೆ ಮಕ್ಕಳಾದ ನಿಮ್ಮ ಹತ್ತಿರ ಇವೆ ಆದ್ದರಿಂದ ತಂದೆಯು ಖುಷಿಪಡುತ್ತಿದ್ದಾರೆ. ಇವುಗಳನ್ನು ಕೇವಲ ಸೇವಾ ಸಾಧನಗಳಂತೆ ಭಾವಿಸಿ ಉಪಯೋಗಿಸಿರಿ. ಈ ಸಾಧನಗಳೆಲ್ಲಾ ಸೇವೆಗಾಗಿ ಏಕೆಂದರೆ ವಿಶ್ವಕಲ್ಯಾಣ ಮಾಡಬೇಕೆಂದರೆ ಈ ಸಾಧನಗಳು ಸಹಯೋಗವನ್ನು ಕೊಡುತ್ತವೆ. ಸಾಧನಗಳಿಗೆ ವಶವಾಗಬಾರದು ಆದರೆ ಸಾಧನಗಳನ್ನು ಸೇವೆಯಲ್ಲಿ ಉಪಯೋಗಿಸಬೇಕು. ಇದು ಮಧ್ಯ ಸಮಯ ಆದ್ದರಿಂದ ಈ ಸಮಯದಲ್ಲಿ ಸಾಧನೆಗಳು ಲಭಿಸುತ್ತವೆ. ಇಷ್ಟು ಸಾಧನಗಳು ಆದಿಯಲ್ಲಿಯೂ ಇಲ್ಲ ಮತ್ತು ಅಂತಿಮದಲ್ಲಿಯೂ ಇರುವುದಿಲ್ಲ. ಇವು ಈ ಸಮಯಕ್ಕಾಗಿ ಮಾತ್ರ ಸೇವೆ ಹೆಚ್ಚಿಸಲು. ಆದರೆ ಇವು ಸಾಧನಗಳು, ನೀವು ಸಾಧನೆಯನ್ನು ಮಾಡುವವರು. ಸಾಧನಗಳ ಹಿಂದೆ ಬಿದ್ದು ಸಾಧನೆಯನ್ನು ಕಡಿಮೆ ಮಾಡಬಾರದು. ಬಾಪ್‌ದಾದಾ ಖುಷಿ ಪಡುತ್ತಿದ್ದಾರೆ- ಮಕ್ಕಳ ದೃಶ್ಯವೂ ಸಹ ನೋಡುತ್ತಿದ್ದಾರೆ. ಕೆಲಸವನ್ನು ಫಟಾಫಟ್ ಮಾಡಿಬಿಡುತ್ತಿದ್ದಾರೆ. ಬಾಪ್‌ದಾದಾ ನಿಮ್ಮ ಆಫೀಸಿಗೂ ಬರುತ್ತಾರೆ. ಹೇಗೆ ಕೆಲಸ ಮಾಡುತ್ತಿದ್ದೀರಿ ಎಂದು ನೋಡುತ್ತಾರೆ. ಬಹಳ ಬಿಸಿಯಾಗಿ ಇರುತ್ತಿದ್ದಿರಲ್ಲವೇ, ಆಫೀಸ್ ಚೆನ್ನಾಗಿ ನಡೆಯುತ್ತಿದೆ ಅಲ್ಲವೇ! ಹೇಗಾದರೆ ಒಂದು ಕ್ಷಣದಲ್ಲಿ ಸಾಧನಗಳನ್ನು ಉಪಯೋಗಿಸುತ್ತಿದ್ದೀರೋ ಹಾಗೆಯೇ ಮಧ್ಯಮಧ್ಯದಲ್ಲಿ ಸ್ವಲ್ಪ ಸಾಧನೆಗಾಗಿಯೂ ಸಮಯವನ್ನು ತೆಗೆಯಿರಿ. ಒಂದು ಕ್ಷಣವಾದರೂ ತೆಗೆಯಿರಿ. ಈಗ ಸಾಧನಗಳ ಮೇಲೆ ಕೈ ಇದೆ ಮತ್ತು ಈಗೀಗಲೇ ಮಧ್ಯ ಮಧ್ಯದಲ್ಲಿ ಒಂದು ಕ್ಷಣವಾದರೂ ತೆಗೆದು ಸಾಧನೆಯನ್ನು ಅಭ್ಯಾಸ ಮಾಡಿರಿ. ಸಾಧನಗಳ ವಿಷಯದಲ್ಲಿ ಎಷ್ಟು ಅಭ್ಯಾಸ ಮಾಡುತ್ತಿರೋ ಅಷ್ಟೇ ಸಹಜವಾಗಿ ನಡೆಸಬಲ್ಲಿರಲ್ಲವೇ? ಹಾಗೆಯೇ ಒಂದು ಕ್ಷಣದಲ್ಲಿ ಸಾಧನೆಯ ಅಭ್ಯಾಸವನ್ನು ಮಾಡಿರಿ. ದಿನವಿಡೀ ಬಹಳಷ್ಟು ಬಿಸಿಯಾಗಿದ್ದೇವೆ, ಸಮಯವಿಲ್ಲ ಎಂದು ಹೇಳಬೇಡಿ. ಬಾಪ್‌ದಾದಾ ಈ ವಿಷಯವನ್ನು ಅಂಗೀಕರಿಸುವುದಿಲ್ಲ. ಒಂದು ತಾಸು ಸಾಧನಗಳನ್ನು ಉಪಯೋಗಿಸಿದಾಗ ಅದರ ಮಧ್ಯದಲ್ಲಿ ಐದಾರು ಕ್ಷಣಗಳನ್ನು ತೆಗೆಯಲಾಗುವುದಿಲ್ಲವೇ? ಐದು ನಿಮಿಷಗಳು ಅಥವಾ ಐದು ಕ್ಷಣಗಳು ಸಹ ತೆಗೆಯದಿರುವುದಷ್ಟು ಬಿಸಿಯಾಗಿ ಯಾರಾದರೂ ಇದ್ದೀರಾ? ತೆಗೆಯಬಲ್ಲಿರಾದರೆ ತೆಗೆಯಿರಿ.

ಇಂದು ಬಹಳ ಬಿಜಿಯಾಗಿ ಇದ್ದೇವೆ, ಬಹಳ ಬಿಜಿಯಾಗಿ ಇದ್ದೇವೆ, ಎಂದು ಮುಖವನ್ನು ಸಹ ಬ್ಯುಸಿಯಾಗಿಸಿಕೊಳ್ಳುತ್ತಿದ್ದೀರಿ. ಇದನ್ನು ಬಾಪ್‌ದಾದಾ ಒಪ್ಪಿಕೊಳ್ಳುವುದಿಲ್ಲ. ಏನನ್ನು ಬೇಕೆಂದುಕೊಂಡರೆ ಅದನ್ನು ಮಾಡಬಲ್ಲಿರಿ. ಆದರೆ ಗಮನ ಕಡಿಮೆಯಾಗಿದೆ. ಹತ್ತು ನಿಮಿಷಗಳಲ್ಲಿ ಈ ಉತ್ತರ ಪೂರ್ತಿ ಮಾಡಬೇಕು ಎಂಬ ಲಕ್ಷ್ಯವನ್ನು ಇಟ್ಟಿದ್ದೀರಿ ಆದ್ದರಿಂದ ಆ ಸಮಯದಲ್ಲಿ ಪೂರ್ತಿ ಮಾಡಬೇಕೆಂದು ಬ್ಯುಸಿಯಾಗಿರುತ್ತಿರಲ್ಲವೇ ಹಾಗೆಯೇ ಹತ್ತು ನಿಮಿಷಗಳಲ್ಲಿ ಈ ಕೆಲಸವನ್ನು ಮಾಡಬೇಕೆಂದು ದಿನಚರಿಯನ್ನು ತಯಾರು ಮಾಡಿಕೊಳ್ಳುತ್ತೀರಲ್ಲವೇ! ಇದರಲ್ಲಿ ಒಂದು ಎರಡು ನಿಮಿಷಗಳು ಈ ಅಭ್ಯಾಸವನ್ನು ಸೇರಿಸಿಕೊಳ್ಳಿರಿ. ಆರು ನಿಮಿಷಗಳಲ್ಲಿ ಒಂದು ಕೆಲಸವು ಮುಗಿಯುತ್ತದೆ ಎಂದಿಟ್ಟುಕೊಳ್ಳಿ

ಅದಕ್ಕಾಗಿ ಆರು ನಿಮಿಷಗಳ ಸಮಯವನ್ನು ಇಟ್ಟುಕೊಳ್ಳುವುದಲ್ಲ. ಆ ಆರು ನಿಮಿಷಗಳೊಂದಿಗೆ ಎರಡು ನಿಮಿಷಗಳು ಸಾಧನೆಗಾಗಿ ಕೂಡಿಸಿ ಎಂಟು ನಿಮಿಷಗಳಾಗಿ ಇಟ್ಟುಕೊಳ್ಳಬೇಕು. ಹೀಗೆ ಮಾಡಬಲ್ಲಿರಾ?

(ಅಮೆರಿಕಾದ ಗಾಯತ್ರಿ ಅಕ್ಕನವರನ್ನು ಕೇಳುತ್ತಿದ್ದಾರೆ) ಬಹಳ ಬಿಜಿ, ಬಹಳ ಬಿಜಿ ಎಂದು ಈಗಿನ್ನು ಹೇಳಬಾರದು. ಎಷ್ಟು ಬಿಸಿಯಾಗಿದ್ದರೂ ಮೊದಲು ಸಾಧನಗಳೊಂದಿಗೆ ಸಾಧನೆಗೂ ಸಮಯವನ್ನು ಕೊಡಿ. ಆದರೆ ಏನಾಗುತ್ತಿದೆ ಎಂದರೆ ಸೇವೆಯಂತು ಬಹಳ ಚೆನ್ನಾಗಿ ಮಾಡುತ್ತಿದ್ದೀರಿ. ಸಮಯವನ್ನು ಉಪಯೋಗಿಸುತ್ತಿದ್ದೀರಿ. ಇದಕ್ಕೆ ಶುಭಾಶಯಗಳು. ಆದರೆ ಸ್ವಉನ್ನತಿ ಅಥವಾ ಸಾಧನೆ ಮಧ್ಯ ಮಧ್ಯದಲ್ಲಿ ಮಾಡದೇ ಇರುವ ಕಾರಣಕ್ಕಾಗಿ ಸುಸ್ತಿನ ಪ್ರಭಾವ ಬೀರುತ್ತಿದೆ. ಬುದ್ಧಿಯು ಸುಸ್ತಾಗುತ್ತಿದೆ. ಕೈಕಾಲುಗಳು ಸಹ ಸುಸ್ತನ್ನು ಅನುಭವ ಮಾಡುತ್ತಿವೆ ಆದರೆ ಮಧ್ಯ ಮಧ್ಯದಲ್ಲಿ ಸಾಧನೆಗಾಗಿ ಸಮಯವನ್ನು ತೆಗೆದರೆ ಸುಸ್ತು ಏನಾದರೆ ಇದೆಯೋ ಅದು ತೊಲಗುತ್ತದೆ. ಖುಷಿಯಿಂದ ಇರುತ್ತೀರಿ ಖುಷಿಯಲ್ಲಿ ಸುಸ್ತು ಇರುವುದಿಲ್ಲ. ನಿಮ್ಮ ಕಾರ್ಯಗಳಲ್ಲಿ ನಿರತರಾಗಿ ಬಿಡುತ್ತಿದ್ದೀರಿ ಅರ್ಧ ಸಮಯ ಕರ್ಮಾಭಿಮಾನದಲ್ಲಿ ಇರುತ್ತೀರಿ. ಹೀಗೆ ಆಗುತ್ತಿದೆ ಅಲ್ಲವೇ? ಕರ್ಮದ ಅಭಿಮಾನಕ್ಕೆ ಅಂಕಗಳಂತೂ ಲಭಿಸುತ್ತದೆ. ವ್ಯರ್ಥವಾಗಿ ಹೋಗುವುದಿಲ್ಲ. ಆದರೆ ಆತ್ಮಭಿಮಾನಿ ಸ್ಥಿತಿಗೆ ಬರುವ ಅಂಕಗಳು ಮತ್ತು ಕರ್ಮದ ಅಭಿಮಾನಕ್ಕೆ ಬರುವ ಅಂಕಗಳಲ್ಲಿ ವ್ಯತ್ಯಾಸವಿರುತ್ತದೆ ಅಲ್ಲವೇ! ಆದ್ದರಿಂದ ಈಗ ಸಮಾನತೆಯನ್ನು ಇಟ್ಟುಕೊಳ್ಳಿರಿ ಲಿಂಕನ್ನು ಕಟ್ ಮಾಡಬೇಡಿರಿ ಜೋಡಿಸಿಯೇ ಇರಿ. ಏಕೆಂದರೆ ಬಹಳಷ್ಟು ಡಬಲ್ ವಿದೇಶಿಯರು ಕೆಲಸದಲ್ಲಿ ಡಬಲ್ ಬ್ಯುಸಿಯಾಗಿ ಇರುತ್ತಿದ್ದಾರೆ ಆದರೆ ಸಮಾನತೆಯನ್ನಿಡಿ. ಎಷ್ಟು ಸಮಯವನ್ನು ತೆಗೆಯಬಲ್ಲಿರಾದರೆ ಅಷ್ಟು ಸಮಯವನ್ನು ತೆಗೆಯಿರಿ. ಒಂದು ಕ್ಷಣವನ್ನು ತೆಗೆಯಿರಿ ಅಥವಾ ನಿಮಿಷವನ್ನು ತೆಗೆಯಿರಿ ಎಷ್ಟಾದರೂ ಆಗಲಿ ತಪ್ಪದೇ ತೆಗೆಯಿರಿ. ತೆಗೆಯಬಲ್ಲಿರಾ? ಪಾಂಡವರು ತೆಗೆಯಬಲ್ಲಿರಾ? ಟೀಚರ್ಸ್ ಮಾಡಬಲ್ಲಿರಾ? ಆಫೀಸ್ ನಲ್ಲಿ ಕೆಲಸ ಮಾಡುವವರು ಮಾಡಬಲ್ಲಿರಾ? ಹಾಗೆಯೇ ಎಂದು ಬಹಳ ಚೆನ್ನಾಗಿ ಹೇಳುತ್ತೀರಿ, ಒಳ್ಳೆಯದು.

ಭಾರತವಾಸಿಯರು ಯಾವ ಪ್ಲಾನ್ಸನ್ನಾದರೆ ತಯಾರು ಮಾಡಿದ್ದೀರೋ ಅವುಗಳನ್ನು ಸಹ ಚೆನ್ನಾಗಿ ತಯಾರು ಮಾಡಿದ್ದೀರಿ. ಇಬ್ಬರೂ ತಮ್ಮ ತಮ್ಮ ವಾಯುಮಂಡಲವನ್ನು ಅನುಸರಿಸಿ ಪ್ಲಾನ್ಸ್ ಚೆನ್ನಾಗಿ ತಯಾರು ಮಾಡಿದ್ದೀರಿ. ಯಾವ ಮಕ್ಕಳಾದರೆ ಪ್ರಿಯಸ್ಮೃತಿಗಳನ್ನು ಕಳುಹಿಸಿದ್ದಾರೆಯೋ ಬಾಪ್‌ದಾದಾ ಆ ಎಲ್ಲಾ ಮಕ್ಕಳಿಗೂ, ಉತ್ತರಗಳಿಂದ ಅಥವಾ ಯಾವುದೋ ಒಂದು ವಿಧಾನದಿಂದ ಪ್ರಿಯಸ್ಮೃತಿಗಳನ್ನು ಕಳಿಸಿದ್ದಾರೆಯೋ ಅವೆಲ್ಲವುಗಳನ್ನು ಸ್ವೀಕರಿಸಿದರು. ಅವುಗಳ ಬದಲಾಗಿ ಬಾಪ್‌ದಾದಾ ಮಕ್ಕಳೆಲ್ಲರಿಗೂ "ದಾತ ಸ್ಥಿತಿ"ಯ ವರದಾನವನ್ನು ಕೊಡುತ್ತಿದ್ದಾರೆ. ಒಳ್ಳೆಯದು. ಒಂದು ಕ್ಷಣದಲ್ಲಿ ಹಾರಲಾಗುತ್ತಿದೆಯೇ? ರೆಕ್ಕೆಗಳು ಶಕ್ತಿಶಾಲಿಯಾಗಿ ಇವೆಯಲ್ಲವೇ? ತಂದೆ ಅಂದಾಕ್ಷಣ ಹಾರಿ ಬಿಡಬೇಕು. (ವ್ಯಾಯಾಮವನ್ನು ಮಾಡಿಸಿದರು)

**ನಾಲ್ಕು ಕಡೆ ಇರುವ ಸರ್ವಶ್ರೇಷ್ಠ ತಂದೆಯ ಸಮಾನವಾದ ದಾತ ಸ್ಥಿತಿಯ ಭಾವನೆಯನ್ನು ಇಡುವ ಶ್ರೇಷ್ಠಾತ್ಮರಿಗೆ, ನಿರಂತರ ಸ್ಮೃತಿ ಮತ್ತು ಸೇವೆಯಲ್ಲಿ ತತ್ಪರರಾಗಿರುವ ಪರಮಾತ್ಮನ ಸೇವಾ ಸಹಯೋಗಿಯಾಗುವ ಮಕ್ಕಳಿಗೆ, ಸದಾ ಲಕ್ಷ್ಯ ಮತ್ತು ಲಕ್ಷಣಗಳನ್ನು ಸಮಾನವಾಗಿ ಇಟ್ಟುಕೊಳ್ಳುವ ಮಕ್ಕಳಿಗೆ, ಸದಾ ತಂದೆಯ ಸ್ನೇಹಿ ಮತ್ತು ಸಮಾನವಾದ ಮಕ್ಕಳಿಗೆ, ಬಾಪ್‌ದಾದಾರವರ ಸಮೀಪವಾಗಿರುವ ನಯನಸಿತಾರೆಗಳಿಗೆ, ಸದಾ ವಿಶ್ವಕಲ್ಯಾಣದ ಭಾವನೆಯಲ್ಲಿರುವ ದಯಾಸಾಗರರಿಗೆ, ಮಾಸ್ಟರ್ ಕ್ಷಮಾ ಸಾಗರರಾದ ಮಕ್ಕಳಿಗೆ, ದೂರ ಕುಳಿತಿರುವವರಿಗೆ, ಮಧುಬನದಲ್ಲಿ ಕೆಳಗೆ ಕುಳಿತಿರುವವರಿಗೆ ಮತ್ತು ಬಾಪ್‌ದಾದಾರವರ ಎದುರುಗಡೆ ಕುಳಿತಿರುವ ಮಕ್ಕಳೆಲ್ಲರಿಗೂ ಪ್ರಿಯ ಸ್ಮೃತಿಗಳು ಮತ್ತು ನಮಸ್ತೆ.**

ರಿವೈಸ್ ಕೋರ್ಸ್ 23-10-1999.

***ಸಮಯದ ಕರೆ- ದಾತಾ ಅಗಿರಿ.***

ಈಗ ಸಮಯವನ್ನನುಸರಿಸಿ ಪ್ರತಿಯೊಂದು ಮಗುವಿಗೆ ದಾತಾ ಸ್ಥಿತಿಯ ಸ್ಮೃತಿ ಇನ್ನೂ ಹೆಚ್ಚಾಗಬೇಕು. ಸರ್ವರ ಪ್ರತಿ ಸ್ನೇಹವೂ ಪ್ರತ್ಯಕ್ಷ ರೂಪದಲ್ಲಿ ಕಾಣಿಸಬೇಕು. ಯಾರು ಹೇಗಿದ್ದರೂ, ಏನಾದರೂ ಆಗಲಿ ನಾನು ಕೊಡಬೇಕು ಎಂದುಕೊಳ್ಳಬೇಕು. ದಾತ ಸ್ಥಿತಿಯುಳ್ಳವರು ಸದಾ ಬೆಹದ್ ವೈರಾಗ್ಯವೃತ್ತಿಯುಳ್ಳವರಾಗಿರುತ್ತಾರೆ. ಹದ್ದಿನ ಸಂಸ್ಕಾರವಿರುವುದಿಲ್ಲ ಮತ್ತು ಸಂಪನ್ನವಾಗಿ, ಸಮೃದ್ಧಿಯಾಗಿ ಇರುತ್ತಾರೆ ದಾತ ಸ್ಥಿತಿಯುಳ್ಳವರು ಸದಾ ಮಾಸ್ಟರ್ ಕ್ಷಮಾ ಸಾಗರಗಿರುತ್ತಾರೆ. ಈ ಕಾರಣದಿಂದಲೇ ಹದ್ದಿನಲ್ಲಿರುವ ತಮ್ಮ ಸಂಸ್ಕಾರಗಳು ಅಥವಾ ಇತರರ ಸಂಸ್ಕಾರಗಳು ಪ್ರತ್ಯಕ್ಷವಾಗುವುದಿಲ್ಲ. ಗುಪ್ತವಾಗಿ ಬಿಡುತ್ತವೆ. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಆನಂದ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಪ್ರತೀ ಕ್ಷಣ ಸೇವೆ ಎಂಬ ವೇದಿಕೆಯ ಮೇಲೆ ಪಾತ್ರವನ್ನು ಅಭಿನಯಿಸುವ ಪರಮಾತ್ಮನ ಸಹಯೋಗಿ ಮತ್ತು ನಿರಂತರ ಸೇವಾದಾರಿ.

2. ನನಗೆ ಸ್ಮೃತಿ ಮತ್ತು ಸೇವೆ ಎರಡರ ಸಮಾನತೆ ಇದೆ.

3. ನಾನು ಸಂಪೂರ್ಣ ಸ್ವಮಾನದ ಸ್ಮೃತಿಯಿಂದ ತಂದೆಯ ಸಮಾನವಾಗುವ ದಾತ ಮತ್ತು ದೇವತೆ.

4. ನನಗೆ ಸ್ವಉನ್ನತಿಯ ಪ್ರತಿ ದಾತ ಸ್ಥಿತಿ, ಸರ್ವರ ಪ್ರತಿ ಸ್ನೇಹವು ಪ್ರತ್ಯಕ್ಷ ರೂಪದಲ್ಲಿ ಇದೆ.

5. ದಾತನಾದ ನಾನು ಸದಾ ಬೆಹದ್ ವೈರಾಗ್ಯವೃತ್ತಿ, ಸಂಪನ್ನವಾಗಿ ಮತ್ತು ಸಮೃದ್ಧಿಯಾಗಿ ಇದ್ದೇನೆ.

6. ನಾನು ಸ್ವಯಂನ ಅಥವಾ ಇತರರ ಹದ್ದಿನ ಸಂಸ್ಕಾರಗಳಿಗೆ ಅತೀತವಾಗಿ ಅರ್ಥಾತ್ ಯಾರಾದರೂ ಗೌರವವನ್ನು ಕೊಟ್ಟರೂ, ಕೊಡದೇ ಇದ್ದರೂ ಎಂತಹ ನಡವಳಿಕೆಯಲ್ಲಿದ್ದರೂ ಎಂತಹ ಮಾತುಗಳನ್ನು ಮಾತನಾಡುತ್ತಿದ್ದರೂ ನನಗೆ ಕೆಲಸಕ್ಕೆ ಬಾರದಿದ್ದರೆ ನಾನು ಆ ಕೆಟ್ಟ ವಿಷಯಗಳನ್ನು ಮನಸ್ಸು, ಬುದ್ಧಿಯಲ್ಲಿ ಧಾರಣೆ ಮಾಡದೇ ದಾತ ಸ್ಥಿತಿಯಿಂದ ಶುಭ ಭಾವನೆ ಶುಭಕಾಮನೆಯನ್ನು ಕೊಡುವ ಮಾಸ್ಟರ್ ಕ್ಷಮಾ ಸಾಗರನು, ಮಾಸ್ಟರ್ ಸಹಯೋಗಿ.

7. ನಾನು ಮನಸಾ, ವಾಚಾ, ಕರ್ಮಣಾ, ಸಂಬಂಧ ಸಂಪರ್ಕದಿಂದ ಪ್ರತಿಕ್ಷಣ ಸೇವೆಯನ್ನು ಮಾಡುವ ನಿರಂತರ ಸೇವಾದಾರಿಯಾಗಿದ್ದೇನೆ.

8. ನಾನು ತಂದೆಯ ಜೊತೆಯೇ ಇರುತ್ತೇನೆ, ಜೊತೆಯೇ ಹೋಗುತ್ತೇನೆ ಎಂಬ ಪ್ರತಿಜ್ಞೆಯ ಪ್ರತ್ಯಕ್ಷ ಸ್ವರೂಪ.

9. ಇಷ್ಟದೇವಿ ದೇವತೆಯಾದ ನಾನು ಸಮಯದ ಕರೆಯ ಮತ್ತು ವಿಶ್ವದಲ್ಲಿರುವ ಆತ್ಮರ ಕರೆಯನ್ನು ಕೇಳಿ ದಾತ ಸ್ಥಿತಿಯ ರೂಪವನ್ನು ಪ್ರತ್ಯಕ್ಷ ಮಾಡಿ ಎಲ್ಲರಿಗೂ ಮುಕ್ತಿಯನ್ನು ಕೊಡುವ ಪೂಜ್ಯ ಸ್ವರೂಪ, ದಯಾ ಹೃದಯ ಸ್ವರೂಪ.

10. ನನ್ನ ಲಕ್ಷ್ಯ ಮತ್ತು ಲಕ್ಷಣಗಳು ಸಮಾನವಾಗಿ ಇವೆ.

11. ನಾನು ಸೂರ್ಯವಂಶಜನು.

12. ಯಾರು ಕೊಟ್ಟರೂ, ಕೊಡದೇ  ಇದ್ದರೂ ಯಾವ ಘಟನೆ ನಡೆದರೂ ನಾನು ದಾತ (ಕೊಡುವುದು) ಎಂಬ ಪದವನ್ನು ಸದಾ ಸ್ಮೃತಿಯಲ್ಲಿಟ್ಟುಕೊಳ್ಳುವ ಇಚ್ಛಾ ಮಾತ್ರಂ ಅವಿದ್ಯಾ ಸ್ವರೂಪ.

13. ನಾನು ಸರ್ವಪ್ರಾಪ್ತಿ ಸಂಪನ್ನ ಸಂಪೂರ್ಣ ಸ್ವರೂಪ.

14. ನಾನು ಸತ್ಯವಾದ ಮತ್ತು ಸ್ವಚ್ಛವಾದ ಹೃದಯಕ್ಕೆ ತಂದೆಯು ರಾಜಿಯಾಗುತ್ತಾರೆ ಎಂಬ ಸ್ಮೃತಿ ಸ್ವರೂಪ.

15. ನನಗೆ ಸೇವೆ ಮತ್ತು ಸ್ವಉನ್ನತಿ ಎರಡರ ಸಮಾನತೆ ಇದೆ.

16. ನಾನು ಸಾಧನಗಳಿಗೆ ಅತೀತವಾಗಿ ಸೇವಾ ಸಾಧನಗಳಂತೆ ಭಾವಿಸಿ ಸೇವೆಯಲ್ಲಿ ಉಪಯೋಗಿಸುವ ವಿಶ್ವಕಲ್ಯಾಣಕಾರಿ.

17. ನಾನು ಪ್ರತಿಯೊಂದು ಕಾರ್ಯವನ್ನು ಮಾಡುವಾಗ ಆ ಕಾರ್ಯಕ್ಕೆ ಬೇಕಾಗುವ ಸಮಯಕ್ಕಿಂತ ಎರಡು, ಮೂರು ನಿಮಿಷವಾದರೂ ಹೆಚ್ಚು ಸಮಯವನ್ನು ಇಟ್ಟುಕೊಂಡು ಸಾಧನೆಯ ಅಭ್ಯಾಸವನ್ನು ಮಾಡುತ್ತಿದ್ದೇನೆ.

18. ನಾನು ಕರ್ಮಾಭಿಮಾನಿ ಸ್ಥಿತಿ ಮತ್ತು ಆತ್ಮಭಿಮಾನಿ ಸ್ಥಿತಿಯ ಸಮಾನಸ್ವರೂಪ.

19. ನಾನು ದಾತ ಸ್ಥಿತಿ ಭವ! ಎಂಬ ವರದಾನದ ವರದಾನಿ.